ಓ ಎಸ್ ನಂಃ 144-14
ಪಿ ಡಬ್ಲ್ಯೂ ಃ 1

ದಿಃ 30-01-2019 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು

ಮುಂದುವರೆದ ಪಾಟೀ ಸವಾಲುಃ ಶ್ರೀ ಜಿ ಪಿ ವಕೀಲರಿಂದ

ನನ್ನ ತಂದೆಗೆ ನಾನು 6ನೇ ಮಗಳು. ನಾನು ಪಿಯುಸಿ ಓದುತ್ತಿರುವಾಗಲೇ ನನ್ನ ಮದುವೆ ಆಗಿತ್ತು ಅಂದರೆ ಸರಿ. ನನ್ನ ಅಕ್ಕ ಗೌರಮ್ಮ ರವರ ಮದುವೆ ಆಗುವ ಮುಂಚೆ ನನ್ನ ಮದುವೆ ಆಗಿತ್ತು ಅಂದರೆ ಸರಿ. ನಮ್ಮನ್ನು ಕರ್ನಾಟಕ ವಿದ್ಯುತ್ ಶಕ್ತಿ ಕಂಪನಿ ಅಲ್ಲಿ ಕೆಲಸ ಮಾಡುತ್ತಿರುವ ಸೋಮಶೇಖರಯ್ಯರವರೊಂದಿಗೆ ನನ್ನ ಮದುವೆ ಆಗಿದೆ ಅಂದರೆ ಸರಿ. ಸೋಮಶೇಖರಯ್ಯರವರು ಅವರ ತಂದೆ ತಾಯಿಗೆ ಒಬ್ಬನೇ ಮಗ ಆಗಿದ್ದು ಅವರಿಗೆ ತುಮಕೂರಿನಲ್ಲಿ 6 ಎಕರೆ ಜಮೀನು ಇತ್ತು ಅಂದರೆ ಸಾಕ್ಷಿ 4ವರೆ ಎಕರೆ ಇತ್ತು ಎಂದು ಹೇಳುತ್ತಾರೆ.

ನನ್ನ ಮದುವೆ ಕಾಲಕ್ಕೆ ನನಗೆ ಹಣ, ಒಡವೆ ಮತ್ತು 60 ಸಾವಿರ ಹಣವನ್ನು ನನ್ನ ಯಜಮಾನರಿಗೆ ವರದಕ್ಷಿಣೆ ಕೊಟ್ಟು ಮದುವೆ ಮಾಡಿಸಿದ್ದರು ಅಂದರೆ ಸರಿಯಲ್ಲ. ನನ್ನ ಗಂಡ ನಿವೃತ್ತಿ ಹೊಂದಿ ಈಗಲೂ ಇದ್ದಾರೆ ಅಂದರೆ ಸರಿ. ನನಗೆ ಇಬ್ಬರು ಮಕ್ಕಳು ಮತ್ತು ಒಬ್ಬ ಮಗ ಅಂದರೆ ಸರಿ. 1ನೇ ಮಗಳು ಸೌಮ್ಯರವರಿಗೆ 38 ವರ್ಷ ವಯಸ್ಸು ಆಗಿದ್ದು ಅವರು ಎಂ ಬಿ ಎ ವಿದ್ಯಾಬ್ಯಾಸ ಮಾಡಿದ್ದಾರೆ ಅಂದರೆ ಸರಿ. ಅವರಿಗೆ ಮದುವೆ ಆಗಿಲ್ಲ ಅಂದರೆ ಸರಿ. ಅದೇ ರೀತಿ ನನ್ನ ಎರಡನೇ ಮಗಳು ಸಾಫ್ಟ್ ವೇರ್ ಇಂಜಿನಿಯರ್ ಆಗಿದ್ದು ಅವಳು ಕೆಲಸ ಮಾಡುತ್ತಿದ್ದಾರೆ ಅಂದರೆ ಸರಿ, ಅವರಿಗೂ ಸಹ ಮದುವೆ ಆಗಿಲ್ಲ ಅಂದರೆ ಸರಿ, ಅವಳು ಸುಮಾರು ಒಂದುವರೆ ಲಕ್ಷ ಸಂಬಳ ತೆಗೆದುಕೊಳ್ಳುತ್ತಿದ್ದಾರೆಂದರೆ ನನಗೆ ಗೊತ್ತಿಲ್ಲ, ಅದೇ ರೀತಿ ನನ್ನ ಮಗ ಸಂತೋಶ್ ಸಹ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದು ಅವರಿಗೆ ಸುಮಾರು ಒಂದುವರೆ ಲಕ್ಷ ಸಂಬಳ ಇದೆ ಅಂದರೆ ನನಗೆ ಗೊತ್ತಿಲ್ಲ.

ನಾನು ನನ್ನ ಮಕ್ಕಳ ಜೊತೆಯಲ್ಲಿದ್ದೇನೆ. ನನ್ನ ಹೆಣ್ಣು ಮಕ್ಕಳು ದುಡಿಯುತ್ತಿದ್ದ ಕಾರಣ ಅವರ ಹಣ ಪೋಲಾಗುತ್ತದೆ ಎಂದು ಹೇಳಿ ನಾನು ಅವರ ಮದುವೆ ಮಾಡಿಲ್ಲ ಅಂದರೆ ಸರಿಯಲ್ಲ. ನಾನು ವರ್ಷಕ್ಕೆ ಎರಡು ಮೂರು ಬಾರಿ ಕೇತೋಹಳ್ಳಿಗೆ ಹೋಗುತ್ತಿದ್ದೆ. ನಾನು 2005 ಇಸವಿ ಇಂದ ಈಚೆಗೆ ನಾನು ಕೇತೋಹಳ್ಳಿಗೆ ಹೋಗಿಲ್ಲ. ಕೇತೋಹಳ್ಳಿಗೇ ಹೋಗಿದ್ದೇನೆ ಅದರೆ ಮನೆಗೆ ಹೋಗಿಲ್ಲ. ಕೇತೋಹಳ್ಳಿ ಗ್ರಾಮಕ್ಕೆ ನಾನು ಆಸ್ತಿ ವಿಚಾರದ ಬಗ್ಗೆ ಹೋಗಿದ್ದೆ. 82 ಇಸವಿಯಿಂದ ನಾನು ಅಲ್ಲಿಗೆ ಹೋಗುತ್ತೇನೆ ಆದರೆ ನಿಖರವಾಗಿ ಎಷ್ಟು ಬಾರಿ ಹೋಗಿದ್ದೇನೆಂದು ನನಗೆ ಹೇಳಲು ಆಗುವುದಿಲ್ಲ.

ನನ್ನ ತಂದೆಯ ರುಜು ನನಗೆ ಗೊತ್ತಿಲ್ಲ. ನನ್ನ ತಂದೆ ಶಿವರುದ್ರಯ್ಯರವರು ದಿಃ18.11.82 ರಂದು

ಅವರು ಬೋರಿಂಗ್ ಆಸ್ಪತ್ರೆಯಲ್ಲಿ ತೀರಿಕೊಂಡಿದ್ದರು ಅಂದರೆ ಸರಿ. ಕೇತೋಹಳ್ಳಿ ಗ್ರಾಮದ ಶಿವರುದ್ರಯ್ಯ ಬಿನ್ ಅಂಗಡಿ ರುದ್ರಯ್ಯ ಅಂದರೆ ನನ್ನ ತಂದೆ ಅಂದರೆ ಸರಿ. ಅವರು 79-80 ಇಸವಿಯಲ್ಲಿ ಸಾಲ ತಗೊಂಡಿದ್ದ ವಿಚಾರದ ಬಗ್ಗೆ ನನಗೆ ಗೊತ್ತಿಲ್ಲ, ಆದರೆ ಜಮೀನಲ್ಲಿ ತೆಂಗಿನ ಬೆಳೆ ಹಾಕಿದ್ದರು. ತಹಶೀಲ್ದಾರ್ ರವರು ನೀಡಿದ ಪಾರಂ ನಂ 3 ಇನ್ಕಂ ಸರ್ಟಿಫಿಕೇಟ್ ಅಲ್ಲಿ ಇರುವ ಸಹಿಯನ್ನು ಸಾಕ್ಷಿ ಅವರದು ಎಂದು ನೋಡಿ ಗುರುತಿಸಿದ ಮೇರೆಗೆ ಅದನ್ನು ನಿಡಿ 1 ಎಂದು ಗುರುತಿಸಲಾಯಿತು. ಹಾಗೂ ಸಾಕ್ಷಿ ಸಹಿಯನ್ನು ನಿಪಿ 1 ಎ ಎಂದು ಗುರುತಿಸಲಾಯಿತು. ನಿಡಿ 1 ರಲ್ಲಿ ನನ್ನ ತಂದೆ ಸಹಿ ಮಾಡಿದ್ದಾರೆಂದರೆ ನನಗೆ ಗೊತ್ತಿಲ್ಲ.

ಸಾಕ್ಷಿಗೆ ತೋರಿಸಿದ ದಾಖಲೆ ಅವರ ತಂದೆ ತೆಂಗಿನ ಗಿಡಗಳನ್ನು ನೆಟ್ಟಲು ಸಾಲ ಪಡೆದಿದ್ದ ದಾಖಲೆ ಅಂದರೆ ಸಾಕ್ಷಿ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ತಂದೆ ಮಾಗಡಿ ಪಿ ಎಲ್ ಡಿ ಬ್ಯಾಂಕ್ ಅಲ್ಲಿ ಸಾಲ ಪಡೆದಿದ್ದ ವಿಚಾರದ ಬಗ್ಗೆ ನನಗೆ ಗೊತ್ತಿಲ್ಲ. ನಾವು ಹೆಣ್ಣು ಮಕ್ಕಳ ಮದುವೆಗಾಗಿ ನನ್ನ ತಂದೆ ಅವರು ಮಾಗಡಿಯ ಪಿ ಎಲ್ ಡಿ ಬ್ಯಾಂಕ್ ಅಲ್ಲಿ ಆಸ್ತಿ ಅಡವು ಇಟ್ಟು ಸಾಲ ತಗೊಂಡಿದ್ದರು ಅಂದರೆ ಸರಿಯಲ್ಲ.

ನನ್ನ ಅಣ್ಣ 6 ನೇ ಪ್ರತಿವಾದಿ ಕಂಟೋನ್ಮೆಂಟ್ ಪೆಟ್ರೋಲ್ ಬಂಕ್ ಅಲ್ಲಿ ಚಾಲಕನಾಗಿ ಕೆಲಸ ಮಾಡುತ್ತಿದ್ದರು ಅಂದರೆ ಸರಿಯಲ್ಲ. ನಾನು ಮತ್ತು 6 ನೇ ಪ್ರತಿವಾದಿ ನನ್ನ ಅಕ್ಕ 4 ನೇ ಪ್ರತಿವಾದಿಯ ಮನೆಯಲ್ಲಿದ್ದೆವು. ನಾನು 78-79 ಇಸವಿಯಲ್ಲಿ ಅವರ ಮನೆಯಲ್ಲಿದ್ದೆ. ನನ್ನ ಅಣ್ಣ 6 ನೇ ಪ್ರತಿವಾದಿ ಅವರ ಮನೆಯಲ್ಲಿ ಬಿ ಕಾಂ, ಎಲ್ ಎಲ್ ಬಿ ವಿದ್ಯಾಭ್ಯಾಸ ಮಾಡುವವರೆಗೆ ಮತ್ತು ನನ್ನ ತಂದೆ ತೀರಿಕೊಳ್ಳುವವರೆಗೆ ಇದ್ದರು. 6 ನೇ ಪ್ರತಿವಾದಿ ನಮ್ಮ ಅಕ್ಕನ ಮನೆಯಲ್ಲಿ ವಾಸ ಮಾಡುತ್ತಿರಲಿಲ್ಲ, ಅವರು ಊರಿನಲ್ಲಿ ವಾಸ ಮಾಡುತ್ತಿದ್ದರು ಅಂದರೆ ಸರಿಯಲ್ಲ. ನಾನು ನನ್ನ ಅಕ್ಕನ ಮದುವೆ ಆಗುವ ಮುಂಚೆ ನಾನು ಮದುವೆ ಆಗಿದ್ದ ಕಾರಣ ನನ್ನ ತಂದೆ ಮತ್ತು ನನ್ನ ಮಧ್ಯೆ ಅನ್ಯೋನ್ಯತೆ ಇರಲಿಲ್ಲ ಅಂದರೆ ಸರಿಯಲ್ಲ. ನನ್ನ ಮದುವೆ ಮೇ 79 ಇಸವಿಯಲ್ಲಿ ಆಗಿತ್ತು. ನನ್ನ ಮದುವೆ ಆದ ನಂತರ ನನ್ನ ತಂದೆಗೆ ಪ್ಯಾರಾಲಿಟಿಕ್ ಸ್ಟ್ರೋಕ್ ಆಗಿ ಅವರು ಬೋರಿಂಗ್ ಆಸ್ಪತ್ರೆ ಮತ್ತು ಮಾತಾಸ್ ಆಸ್ಪತ್ರೆ ಮತ್ತು ಇತರೆ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆದಿದ್ದರು ಅಂದರೆ ಸರಿಯಲ್ಲ, ನನ್ನ ತಂದೆಯನ್ನು ನೋಡಲು ನಾನು ಯಾವತ್ತೂ ಸಹ ಊರಿಗೆ ಬಂದಿಲ್ಲ ಅಂದರೆ ಸರಿಯಲ್ಲ.

ನನ್ನ ತಂದೆ ನಿಮಾನ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದರು ಅಂದರೆ ಸರಿ. ನಾನು ಊರಿನಲ್ಲಿರುವ ಬಗ್ಗೆ ತೋರಿಸಲು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ ಅಂದರೆ ಸಾಕ್ಷಿ ನಾನು ಬಂದು ಹೋಗುವ ಬಗ್ಗೆ ದಾಖಲೆ ಕೊಡಲು ಆಗುವುದಿಲ್ಲ ಎಂದು ಹೇಳುತ್ತಾರೆ. ನಾನು ಊರಿಗೆ ಯಾವತ್ತೂ ಬಂದಿಲ್ಲ ಮತ್ತು ನನ್ನ ಮತ್ತು ನನ್ನ ತಂದೆ ಮಧ್ಯೆ ಮಾತುಕತೆ ಇರಲಿಲ್ಲ ಅಂದರೆ ಸರಿಯಲ್ಲ.

ನನ್ನ ಅಣ್ಣ 6 ನೇ ಪ್ರತಿವಾದಿ ಎಲ್ ಎಲ್ ಬಿ ವಿದ್ಯಾಬ್ಯಾಸ ಮಾಡಲು ಬೆಳಗಿನ ಕ್ಲಾಸ್ ಗೆ ಹೋಗುತ್ತಿದ್ದರು ಅಂದರೆ ಸಾಕ್ಷಿ ಸಂಜೆ ಹೋಗುತ್ತಿದ್ದರು ಎಂದು ಹೇಳುತ್ತಾರೆ, ಅವರು 7 ಗಂಟೆ

ಯಿಂದ 10 ಗಂಟೆವೆರೆಗೆ ಕಾಲೇಜಿಗೆ ಹೋಗಿ ನಂತರ ಕೆಲಸಕ್ಕೆ ಹೋಗುತ್ತಿದ್ದರು ಅಂದರೆ ಸರಿಯಲ್ಲ. 6ನೇ ಪ್ರತಿವಾದಿ ಅವರು ನಮ್ಮ ತಂದೆ ತೀರಿಕೊಂಡ ನಂತರ ನಮ್ಮ ತಾಯಿಯನ್ನು ನೋಡಿಕೊಂಡು ಊರಿನಲ್ಲಿ ವಾಸ ಮಾಡುತ್ತಿದ್ದರು ಅಂದರೆ ಸರಿಯಲ್ಲ. ಅವರು ಸಂಜೆ ಕ್ಲಾಸ್ ಗೆ ಹೋಗುತ್ತಿದ್ದರೆಂದು ನಾನು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನಗೆ ಯಾವುದೇ ವಿಚಾರ ಗೊತ್ತಿಲ್ಲದಿದ್ದರೂ ಸಹ ಈ ದಾವೆಗೋಸ್ಕರ ಸುಳ್ಳು ವಿಚಾರ ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ನನ್ನ ವಾದ ಪತ್ರ ಮತ್ತು ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳನ್ನು ನಾನೇ ಹೇಳಿ ಬರೆಸಿದ್ದೇನೆ. ಅವುಗಳನ್ನು ನಾನು ಓದಿಸಿ ತಿಳಿದುಕೊಂಡಿದ್ದೇನೆ.

ನನ್ನ ಹಿಂದಿನ ಪಾಟೀ ಸವಾಲಿನಲ್ಲಿ ನಾನು ವಿಲ್ ನ ಬಗ್ಗೆ ಹೇಳಿದ್ದೇನೆ. ಸದರಿ ವಿಲ್ ಅನ್ನು ನನ್ನ ತಂದೆಯವರು ಮಾಡಿಲ್ಲ. ನನ್ನ ಅಣ್ಣ 86 ಇಸವಿಯಲ್ಲಿ ಕಲ್ಪತರು ಗ್ರಾಮೀಣ ಬ್ಯಾಂಕ್ ಅಲ್ಲಿ ಸಾಲ ಪಡೆದಿದ್ದರು ಅಂದರೆ ನನಗೆ ಗೊತ್ತಿಲ್ಲ. ನನ್ನ ತಂದೆ ಮತ್ತು ಅಣ್ಣ ಸಾಲ ಮಾಡಿಕೊಂಡು ಅವರ ಸಂಸಾರಗಳನ್ನು ಸಾಕುತ್ತಿದ್ದರು ಅಂದರೆ ಸರಿಯಲ್ಲ. ಸಾಕ್ಷಿ ನನ್ನ ತಂದೆಗೆ ಮಾವಿನ ತೋಟದಿಂದ 50 ಸಾವಿರ ಆದಾಯ ಬರುತ್ತಿತ್ತು ಎಂದು ಹೇಳುತ್ತಾರೆ. ಸದರಿ ಆದಾಯ ಬರುತ್ತಿತ್ತು ಎಂದು ತೋರಿಸಲು ನನ್ನ ಬಳಿ ಯಾವುದೇ ದಾಖಲೆಗಳು ಇಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಪಸಲು ಕೊಡುತ್ತಿದ್ದರು ದುಡ್ಡು ಈಸಿಕೊಳ್ಳುತ್ತಿದ್ದರು. ಸದರಿ ಪಸಲುಗಳನ್ನು ಯಾರಿಗೆ ಕೊಡುತ್ತಿದ್ದರೆಂದು ನನಗೆ ಅವರ ಹೆಸರುಗಳನ್ನು ಹೇಳಲು ಆಗುವುದಿಲ್ಲ.  ಸದರಿ ಹಣದ ವ್ಯವಹಾರದ ಬಗ್ಗೆ ಯಾವುದೇ ಬರವಣಿಗೆ ಆಗಿಲ್ಲ. ನನ್ನ ತಂದೆಗೆ ಇಟ್ಟಿಗೆ ಗೂಡು ಹಾಕಿದ್ದರು ಆದರೆ ಅದಕ್ಕೆ ಲೈಸೆನ್ಸ್ ಪಡೆದಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ.

ಸ ನಂ 6/2ಬಿ ಅಲ್ಲಿ ಇಟ್ಟಿಗೆ ಗೂಡನ್ನು ಹಾಕಿದ್ದರು, ಸದರಿ ಇಟ್ಟಿಗೆ ಗೂಡನ್ನು 78 ಇಸವಿಯಿಂದ ಇಟ್ಟಿದ್ದರು. ಅದರ ಬಗ್ಗೆ ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿಲ್ಲ. ಈ ರೀತಿ ಆದಾಯ ಬರುತ್ತಿತ್ತು ಎಂದು ನಾನು ನನ್ನ ದಾವಾ ಪತ್ರದಲ್ಲಿ ಹೇಳಿಲ್ಲ ಅಂದರೆ ಸರಿ. ಶಿವರುದ್ರಯ್ಯರವರು ದಿಃ05.12.81 ರಂದು ವಿಲ್ ಬರೆದಿದ್ದರು ಎಂದು ನಾನು ನನ್ನ ದಾವಾ ಪತ್ರದಲ್ಲಿ ಹೇಳಿಲ್ಲ. 8ನೇ ಪ್ರತಿವಾದಿ ಈ ದಾವೆಯಲ್ಲಿ ಒಂದು ವಿಲ್ ಆಗಿದೆ ಎಂದು ಹೇಳಿ ಒಂದು ವಿಲ್ ಅನ್ನು ಕೊಟ್ಟಿದ್ದಾರೆ ಅಂದರೆ ನನಗೆ ಗೊತ್ತಿಲ್ಲ. 8ನೇ ಪ್ರತಿವಾದಿ ಅವರು ಸಲ್ಲಿಸಿದ ಲಿಖಿತ ತಕರಾರನ್ನು ನಾನು ಓದಿ ಪರೀಕ್ಷಿಸಿಲ್ಲ. ಸದರಿ ವಿಲ್ ಅನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬೇಕು ಎಂದು ಹೇಳಿ ನಾನು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದೇನೆ. ಆದರೆ ಸದರಿ ವಿಲ್ ಅನ್ನು ಅವರು ಹಾಜರುಪಡಿಸಿಲ್ಲ. ದಾವಾ ಸ್ವತ್ತಿನಲ್ಲಿ ನನಗೆ ಯಾವುದೇ ರೀತಿಯ ಹಕ್ಕು ಇಲ್ಲ ಅಂದರೆ ಸರಿಯಲ್ಲ. ಆಸ್ತಿ ನನಗೆ ಬರಬೇಕು ಎಂದು ಹೇಳಿ ನಾನು ನನ್ನ ತಂದೆಗೆ ಯಾವುದೇ ನೋಟೀಸನ್ನು ಕೊಟ್ಟಿಲ್ಲ.

ನನ್ನ ತಂದೆ ತೀರಿಕೊಂಡ ನಂತರ ನಾನು ನನ್ನ ಅಣ್ಣಂದಿರಿಗೆ ಬಾಗ ಕೇಳಿ ಯಾವುದೇ ನೋಟೀಸನ್ನು ಕೊಟ್ಟಿಲ್ಲ, ಆದರೆ ಅದರ ಬಗ್ಗೆ ಮಾತುಕತೆ ಆಡಿದ್ದೆ. ಯಾವ ದಿನಾಂಕದಂದು ಮಾತುಕತೆ ಆಗಿತ್ತು ಎಂದು ಹೇಳಲು ಆಗುವುದಿಲ್ಲ. ಸದರಿ ಮಾತುಕತೆ ಅಲ್ಲಿ ನಾವು ಮನೆಯವರು ಮಾತ್ರ ಇದ್ದೆವು.

ಹೊರಗಡೆಯವರು ಯಾರೂ ಇರಲಿಲ್ಲ. ದಾವಾ ಐಟಂ ನಂ 4ನ್ನು ಕುಟುಂಬದ ಪೋಷಣೆಗಾಗಿ ಮಾರಾಟ ಮಾಡಿದ್ದರು ಅಂದರೆ ಸಾಕ್ಷಿ ಮಾರಾಟ ಆಗಿದ್ದ ವಿಚಾರದ ಬಗ್ಗೆ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಹಾಗೂ ಸದರಿ ಆಸ್ತಿಯನ್ನು ಯಾವ ಕಾರಣಕ್ಕಾಗಿ ಮಾರಾಟ ಮಾಡಿದ್ದಾರೆಂದು ನನಗೆ ಗೊತ್ತಿಲ್ಲ. ನನ್ನ ಅಣ್ಣಂದಿರಿಗೆ ತೊಂದರೆ ಮಾಡುವ ಉದ್ದೇಶದಿಂದ ನಾನು ಯಾವುದೇ ಬಾಗಕ್ಕೆ ಅರ್ಹರಿಲ್ಲದಿದ್ದರೂ ಸಹ ಸುಳ್ಳು ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

**(ಉಕ್ತ ಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಎ ಓ**

**ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶರು,**
**ಮಾಗಡಿ.**